O.S.95/2021 Cross of PW 1

ದಿನಾಂಕ 02-02-2024 ರಂದು ಸಾಕ್ಷಿಗೆ ಪ್ರಮಾಣ ವಚನಬೋಧಿಸಿ ಪಾಟೀ ಸವಾಲಿಗೆ ಒಳಪಡಿಸಲಾಯಿತು.

**ಪಾಟೀ ಸವಾಲು :** ಪ್ರತಿವಾದಿ ಪರ ಶ್ರೀ ಪಿ ಬಿ ಎ ವಕೀಲರಿಂದ.

ನಾವು ಒಟ್ಟು 4 ಜನ ಅಣ್ಣ ತಮ್ಮಂದಿರು ಹಾಗೂ ಇಬ್ಬರು ಅಕ್ಕ ತಂಗಿಯರು. ದಾವಾ ಆಸ್ತಿಗಳು ನನ್ನ ತಂದೆಯ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ. ನನ್ನ ಅಣ್ಣ ತಮ್ಮಂದಿರು ಹಾಗೂ ಅಕ್ಕ ತಂಗಿಯರು ಸೇರಿ ಕಾನೂನು ಪ್ರಕಾರ ನ್ಯಾಯಾಲಯದಲ್ಲಿ ದಾವಾ ಆಸ್ತಿಗಳ ಕುರಿತು ವಿಭಾಗ ಮಾಡಿಕೊಂಡಿದ್ದೇವೆ. ಸದರಿ ವಿಭಾಗದ ಪ್ರಕಾರ ಈಗ ನನಗೆ ತೋರಿಸುತ್ತಿರುವ ದಾಖಲೆ ಪ್ರಕಾರ ನಕಾಶೆ ತಯಾರಾಗಿರುತ್ತದೆ ಎಂದರೆ ಸರಿ. ಸದರಿ ನಕಾಶೆಯನ್ನು ನಿಡಿ 1 ಎಂದು ಗುರುತಿಸಲಾಯಿತು. ದಾವಾ ಆಸ್ತಿಗಳ ಒಂದು ಭಾಗದಲ್ಲಿ ಮನೆ ಇರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ದಾವಾ ಸಿ ಟಿ ಎಸ್ ಆಸ್ತಿಗಳ ಮುಂದಿನ ಭಾಗದಲ್ಲಿ ಮನೆ ಇದ್ದು, ಹಿಂದಿನ ಭಾಗದಲ್ಲಿ ಖಾಲಿ ಜಾಗ ಇರುತ್ತದೆ ಎನ್ನುತ್ತಾರೆ. ನನ್ನ ಮನೆ ಮತ್ತು ಹಿತ್ತಲು ಜಾಗದ ನಂತರ ನನ್ನ ಇಬ್ಬರು ಸಹೋದರರು ಮತ್ತು ಇಬ್ಬರು ಸಹೋದರಿಯರ ಖಾಲಿ ಜಾಗ ಇರುತ್ತದೆ. ಪ್ರತಿವಾದಿಯ ಜೊತೆ ನನ್ನ ಉಳಿದ ಸಹೋದರ ಮತ್ತು ಸಹೋದರಿಯರ ತಕರಾರು ಇರುವುದಿಲ್ಲ ಹಾಗೂ ನನ್ನೊಬ್ಬನ ತಕರಾರು ಮಾತ್ರ ಇರುತ್ತದೆ ಎಂದರೆ ಸರಿ. ನನ್ನ ತಂದೆಯ ಪಿತ್ರಾರ್ಜಿತ ಹಳೆಯ ಮನೆಯ ಪೈಕಿ ಅರ್ಧ ಭಾಗ ನನಗೆ ಹಾಗೂ ಉಳಿದ ಅರ್ಧ ಭಾಗ ನನ್ನ ಹಿರಿಯ ಸಹೋದರನಿಗೆ ಬಂದಿರುತ್ತದೆ.

ಪ್ರತಿವಾದಿಯ ಅಜ್ಜನ ಹೆಸರು ಮಲ್ಲಿಕಾರ್ಜುನ ಹುಬ್ಬಳ್ಳಿ ಎಂದರೆ ಸರಿ. ಪ್ರತಿವಾದಿಯ ಅಜ್ಜನ ಮನೆ ನಮ್ಮ ಮನೆಗೆ ಹೊಂದಿಕೊಂಡು ಹಳೆ ಮನೆ ಆಗಿತ್ತು ಎಂದರೆ ಸರಿ. ನಮ್ಮ ಕುಟುಂಬದ ಹಿಂಬಾಗದಲ್ಲಿ ಬಿದ್ದ ಹಳೆಯ ಮನೆಯನ್ನು ರಿಪೇರಿ ಮಾಡಿಕೊಂಡಿದ್ದೇವೆ. ಅದೇ ರೀತಿ ಪ್ರತಿವಾದಿಯ ಅಜ್ಜನ ಮನೆಯು ಹಳೆಯದಾಗಿದ್ದರಿಂದ ಸದರಿ ಮನೆಯನ್ನು ತೆಗೆದು ಹೊಸ ಮನೆಯನ್ನು ಕಟ್ಟಿದರು ಎಂದರೆ ಸರಿ. ಪ್ರತಿವಾದಿಯ ಅಜ್ಜ ತೀರಿಕೊಂಡು 5 ವರ್ಷಗಳಾದವು. ಪ್ರತಿವಾದಿಯ ಅಜ್ಜ ಪುರಸಭೆಯಿಂದ ಅನುಮತಿ ಪಡೆದು ಆರ್ ಸಿ ಸಿ ಮನೆ ಕಟ್ಟಿರುತ್ತಾರೆ ಎಂದರೆ ಸರಿ. ಪ್ರತಿವಾದಿಯ ಅಜ್ಜ ಆರ್ ಸಿ ಸಿ ಮನೆ ಕಟ್ಟುವಾಗ ನಮ್ಮ ನಡುವೆ ತಕರಾರು ಇರಲಿಲ್ಲ ಹಾಗೂ ಹೊಂದಾಣಿಕೆಯಿಂದ ಆತ ಮನೆ ಕಟ್ಟಿಕೊಂಡನು ಎಂದರೆ ಸರಿ. ನಮ್ಮ ಹಳೆ ಮನೆಯ ಹಿಂದಿನ ಗೋಡೆಯನ್ನು ಎತ್ತರಿಸಿ ನಾವು ಮೇಲ್ಛಾವನೆ ಹಾಕಿರುತ್ತೇವೆ ಎಂದರೆ ಸರಿ. ಪ್ರತಿವಾದಿಯು ಬ್ಯಾಂಕಿನಿಂದ ಸಾಲ ಪಡೆದು ಹಾಗೂ ಪುರಭೆಯಿಂದ ಅನುಮತಿ ಪಡೆದು ತನ್ನ ಅಜ್ಜನು ಕಟ್ಟಿದ

ಮನೆಯ ಮೇಲೆ ಮೊದಲ ಮಹಡಿಯನ್ನು ಕಟ್ಟಿರುತ್ತಾಳೆ ಎಂದರೆ ಸರಿ. ನಮ್ಮ ಮತ್ತು ಪ್ರತಿವಾದಿಯ ಜಾಗಗಳನ್ನು ಸರ್ವೇ ಮಾಡಿ ಗಡಿಕಲ್ಲು ಹಾಕಿದ್ದಾರೆ ಎಂದರೆ ಸರಿಯಲ್ಲ. ನಮ್ಮ ಮನೆಯ ಹಿತ್ತಲು ಕಡೆ ಶೌಚಾಲಯ ಇರುತ್ತದೆ ಎಂದರೆ ಸರಿ. ಸದರಿ ಶೌಚಾಲಯ ನಮ್ಮ ಜಾಗದಲ್ಲಿ ಇರುತ್ತದೆ. ಈಗ ತೋರಿಸುತ್ತಿರುವ ಭಾವಚಿತ್ರದಲ್ಲಿ ಸದರಿ ಶೌಚಾಲಯ ಮತ್ತು ಮೇಲೆ ಹೇಳಿದ ಎತ್ತರಿಸಿ ಕಟ್ಟಿದ ಗೋಡೆ ಕಂಡು ಬರುತ್ತದೆ ಎಂದು ಸೂಚಿಸಲಾಗಿ ಸಾಕ್ಷಿ ಸದರಿ ಸೂಚನೆಯನ್ನು ಒಪ್ಪಿಕೊಂಡಿದ್ದು ಸದರಿ ಭಾವಚಿತ್ರಗಳನ್ನು ನಿಡಿ 2 ಎಂದು ಗುರುತಿಸಲಾಯಿತು. ನಿಡಿ 2 ರಲ್ಲಿ ಮೂರು ಕಂಬ ನಿಂತಿರುವುದು ಕಂಡು ಬರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ಕಂಬಗಳನ್ನು ಕಾನೂನು ಬಾಹಿರವಾಗಿ ಹಾಕಿರುವ ಕಂಬಗಳು ಆಗಿರುತ್ತವೆ ಎನ್ನುತ್ತಾರೆ. ಪ್ರತಿವಾದಿ ನನ್ನ ದಾವಾ ಆಸ್ತಿಯಲ್ಲಿ ಯಾವುದೇ ರೀತಿ ಅತೀಕ್ರಮಣ ಮಾಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಮುಂದಿನ ಭಾಗದಲ್ಲಿ 6 ಇಂಚು ಹಾಗೂ ಹಿಂದಿನ ಭಾಗದಲ್ಲಿ 100 ಅಡಿ ಜಾಗವನ್ನು ಪ್ರತಿವಾದಿ ಅತೀಕ್ರಮಣ ಮಾಡಿದ್ದಾಳೆ ಎನ್ನುತ್ತಾರೆ. ಸಾಕ್ಷಿಯು ಮುಂದುವರೆದು ತನ್ನ ಮನೆಗೆ ತಾಗಿ ಪ್ರತಿವಾದಿಯು ಪಿಲ್ಲರ್ ನಿಲ್ಲಿಸಿರುತ್ತಾಳೆ ಎನ್ನುತ್ತಾರೆ. ಪ್ರತಿವಾದಿಯು ದಾವಾ ಆಸ್ತಿಯಲ್ಲಿ ಯಾವುದೇ ಪಿಲ್ಲರ್ ನಿಲ್ಲಿಸಿಲ್ಲ ಹಾಗೂ ಯಾವುದೇ ಜಾಗ ಅತೀಕ್ರಮಿಸಿಲ್ಲ ಎಂದರೆ ಸರಿಯಲ್ಲ. ದಾವೆ ಹೂಡಲು ಯಾವುದೇ ವ್ಯಾಜ್ಯ ಕಾರಣ ಇಲ್ಲದಿದ್ದರೂ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಪ್ರತಿವಾದಿಯ ಕಟ್ಟಡದಿಂದ ತನ್ನ ಮನೆಗೆ ಮಳೆಗಾಲದಲ್ಲಿ ನೀರು ಬರುತ್ತದೆ ಎನ್ನುತ್ತಾರೆ. ಆ ರೀತಿ ಪ್ರತಿವಾದಿಯ ಕಟ್ಟಡದಿಂದ ನೀರು ನಮ್ಮ ಮನೆಯ ಮೇಲೆ ಬಂದು ಕಟ್ಟಡ ಹಾನಿಯಾಗುತ್ತದೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ದಾವೆ ಹೂಡುವ ಪೂರ್ವದಲ್ಲಿ ಪ್ರತಿವಾದಿಗೆ ನೊಟೀಸ್ ನೀಡಿದ್ದಾರಾ ಎಂದರೆ ಸಾಕ್ಷಿ ಬಾಯಿ ಮಾತಲ್ಲಿ ಹೇಳಿದ್ದೆ ಎನ್ನುತ್ತಾರೆ. ನನ್ನ ಹೆಂಡತಿಯನ್ನು ಹೊರತುಪಡಿಸಿ ಬೇರೆ ಯಾರು ಸಾಕ್ಷಿದಾರರು ಇರುವುದಿಲ್ಲ.

ನಿಮ್ಮ ಜಾಗ ಸರ್ವೇ ಮಾಡಿಕೊಂಡು ಕಂಪೌಂಡ ಕಟ್ಟಿಕೊಳ್ಳಲು ಪ್ರತಿವಾದಿಯ ತಕರಾರು ಇರುವುದಿಲ್ಲ ಎಂದರೆ ಸಾಕ್ಷಿ ಕಂಪೌಂಡ ಕಟ್ಟಲು ಪ್ರತಿವಾದಿ ತಕರಾರು ಮಾಡಿರುತ್ತಾಳೆ ಎನ್ನುತ್ತಾಳೆ. ಕಂಪೌಂಡ ಕಟ್ಟಿಕೊಳ್ಳಲು ಪುರಸಭೆಯಿಂದ ಅನುಮತಿ ಪಡೆದಿಲ್ಲ. ಸಾಕ್ಷಿಯು ಮುಂದುವರೆದು ಮುಂದೆ ಪಡೆಯುತ್ತೇನೆ ಎನ್ನುತ್ತಾರೆ. ಕಂಪೌಂಡ ಕಟ್ಟಲು ಪ್ರತಿವಾದಿ ತಕರಾರು ಮಾಡಿರುತ್ತಾಳೆ ಎಂದು ಸುಳ್ಳು ಆರೋಪ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಮೊದಲು ನಮ್ಮ ಮನೆ ಮತ್ತು ಪ್ರತಿವಾದಿಯ ಮನೆಯ ಹಿತ್ತಿಲಿನ ನಡುವೆ ಬೇಲಿ ಇತ್ತು ಎಂದರೆ ಸರಿ. ಸದರಿ ಬೇಲಿ ಗಡಿಯ ಪ್ರಕಾರ ನಮ್ಮ ಶೌಚಾಲಯ ಕಟ್ಟಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ತನ್ನ ಮತ್ತು ತನ್ನ ಸಹೋದರ ಮತ್ತು ಸಹೋದರಿಯರ ನಡುವೆ ವಾಟಣಿ ಆದಾಗ ಸರ್ವೇ ಮಾಡಿಸಿ ಸದರಿ ಶೌಚಾಲಯ ಕಟ್ಟಿಕೊಂಡಿದ್ದೇನೆ ಎನ್ನುತ್ತಾರೆ.

**ಮರು ವಿಚಾರಣೆ - ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂ., ಹಳಿಯಾಳ.